# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಗೊಟ್ಟಿಗೆರೆ ವಾರ್ಡ್ ಸಂಖ್ಯೆ-194,

## ವಾರ್ಡ್ ಕಛೇರಿಯಲ್ಲಿ ದಿನಾಂಕ: 02-01-2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ದಿನಾಂಕ: 02-01-2021 ರಂದು ಬೆಳಿಗ್ಗೆ 11:00 ಘಂಟೆಗೆ ನಡೆಸಲಾದ ವಾರ್ಡ್ ಸಮಿತಿ ಸಭೆಯಲ್ಲಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ದಿನಾಂಕ: 02-01-2021 ರಂದು ನಡೆದ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಕೆಳಕಂಡಂತೆ ಚರ್ಚಿಸಲಾಯಿತು. ಹಾಗೂ ಸದರಿ ಸಭೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರು ಗೈರುಹಾಜರಾಗಿರುತ್ತಾರೆ. ಸದರಿ ಅಧಿಕಾರಿ ರವರಿಗೆ ಮುಂದಿನ ಸಭೆಗಳಲ್ಲಿ ತಪ್ಪದೇ ಹಾಜರಾಗಲೂ ಸೂಚಿಸಿದೆ.

ಸದರಿ ಸಭೆಗೆ ಈ ಕೆಳಕಂಡ ಸದಸ್ಯರು ಮತ್ತು ಅಧಿಕಾರಿ ವರ್ಗದವರು ಹಾಜರಾಗಿದ್ದರು.

1. ಶ್ರೀಮತಿ. ವಿ.ಕೆ ರಮಾಮಣಿ, ಉಪ ಆಯುಕ್ತರು (ಮಾಹಿತಿ ತಂತ್ರಜ್ಞಾನ) ಹಾಗೂ ಅಧ್ಯಕ್ಷರು, ಗೊಟ್ಟಿಗೆರೆ, ವಾರ್ಡ್ ಸಮಿತಿ, ಬೊಮ್ಮನಹಳ್ಳಿ, ಬೆಂಗಳೂರು.
2. ಶ್ರೀ. ರಮೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಕಾರ್ಯದರ್ಶಿ, ಗೊಟ್ಟಿಗೆರೆ, ವಾರ್ಡ್ ಸಮಿತಿ, ಬೊಮ್ಮನಹಳ್ಳಿ, ಬೆಂಗಳೂರು.
3. ಶ್ರೀ. ಮಾರುತಿ.ಕೆ.ಎನ್. ಸಹಾಯಕ ಅಭಿಯಂತರರು.
4. ಶ್ರೀ. ರಮೇಶ್.ಸಹಾಯಕ ಕಂದಾಯ ಅಧಿಕಾರಿ, (ಅಂಜನಾಪುರ ಉಪ ವಿಭಾಗ).
5. ಶ್ರೀ. ಎನ್.ಪ್ರಭುಶಂಕರ. ಹುಳಿಮಾವು (A.S.I).
6. ಶ್ರೀ. ಚೇತನ್, ಆರೋಗ್ಯ ಸಹಾಯಕರು, ಗೊಟ್ಟಿಗೆರೆ.
7. ಅಧ್ಯಕ್ಷರು, ಸೌತ್ ಅವೆನ್ಯೂ ಬಡಾವಣೆ, ಗೊಟ್ಟಿಗೆರೆ
8. ಅಧ್ಯಕ್ಷರು, ಪರಿವರ್ತನಾ ಸಂಘ, ರಾಯಲ್ ಕೌಂಟಿ, ಗೊಟ್ಟಿಗೆರೆ
9. ಅಧ್ಯಕ್ಷರು, ಕ್ಲಾಸಿಕ್ ಆರ್ಚರ್ಡ್ಸ್, ಗೊಟ್ಟಿಗೆರೆ.
10. ಅಧ್ಯಕ್ಷರು, ಜೆ.ಪಿ.ನಗರ 8ನೇ ಹಂತ ಬಡಾವಣೆ.
11. ಆರ್ಯಹಂಸ ಗ್ರ್ಯಾಂಡ್ ಅಪಾರ್ಟ್‌ಮೆಂಟ್.

Scanned by CamScanner

| ಕ್ರಸಂ | ವಿಷಯ | ಸಭೆಯ ನಿರ್ಣಯ |
|---|---|---|
| (I) | (i) My City My Budget 2021-22 | ಹಿಂದಿನ ಎರಡು ಸಭೆಗಳಲ್ಲಿ ತಿಳಿಸಿರುವಂತೆ ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸ್ಥಳಗಳಲ್ಲಿ ನಿರ್ಮಿಸಬಹುದಾದ ಸಾರ್ವಜನಿಕರ ಶೌಚಾಲಯಗಳು ಹಾಗೂ ರಸ್ತೆ ಬದಿ ದುರಸ್ಥಿಗೊಂಡಿರುವ ಅಥವ ಹೊಸ ಪಾದಚಾರಿ ಮಾರ್ಗಗಳ ಬಗ್ಗೆ ಸಲಹೆಗಳನ್ನು ಆನ್‌ಲೈನ್ ಅಥವ ಆಫ್‌ಲೈನ್ ಮೂಲಕ ನೀಡಲು ಕೋರಲಾಯಿತು. |
| (II) | **ದಿನಾಂಕ: 02-01-2021ರ ಸಭೆಯಲ್ಲಿ ಚರ್ಚಿಸಲಾದ ವಿಷಯಗಳಿಗೆ ಸಂಬಂಧಪಟ್ಟಂತೆ ಅನುಪಾಲನಾ ವರದಿಯ ಬಗ್ಗೆ.** | |
| | **i.** ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕುಡಿಯುವ ನೀರಿನ ಸಂಪರ್ಕ ಹಾಗೂ Booster Pump ಗಳನ್ನು BDA ಬಡಾವಣೆಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆ. | ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರು ಅನುಪಾಲನಾ ವರದಿ ಸಲ್ಲಿಸಿರುವುದಿಲ್ಲ ಹಾಗೂ ಸಭೆಗೆ ಹಾಜರಾಗಿರುವುದಿಲ್ಲ, ಮುಂದಿನ ಸಭೆಗಳಲ್ಲಿ ತಪ್ಪದೇ ಹಾಜರಾಗುವಂತೆ, ಸೂಚಿಸಲು ಸಭೆಯಲ್ಲಿ ತಿಳಿಸಿಲಾಯಿತು. |
| | **ii.** ಕ್ಲಾಸಿಕ್ ಆರ್ಚರ್ಡ್ಸ್ ರಸ್ತೆ ಕಾಮಗಾರಿ ಪ್ರಗತಿಯ ಬಗ್ಗೆ. | ವಾರ್ಡ್ ಅಭಿಯಂತರರು ಕಾಮಗಾರಿಯನ್ನು ಪೂರ್ಣಗೊಳಿಸಲು ಅಗತ್ಯ ಕ್ರಮ ವಹಿಸುವುದು. |
| | **iii.** ಕ್ಲಾಸಿಕ್ ಆರ್ಚರ್ಡ್ಸ್ ಬಡಾವಣೆಯ ಖಾಲಿ ನಿವೇಶನಗಳಲ್ಲಿ ವಸತಿ ನಿರ್ಮಾಣ ಪ್ರಗತಿಯಲ್ಲಿದ್ದು, Building Bye Laws ರನ್ವಯ ನಿರ್ಮಾಣ ಮಾಡಲು ನೋಟಿಸ್ ನೀಡುವ ಬಗ್ಗೆ. | ಅಭಿಯಂತರರು ಸಂಬಂಧಪಟ್ಟವರಿಗೆ ನೋಟೀಸ್ ಈಗಾಗಲೇ ಜಾರಿಗೊಳಿಸಿದ್ದು, ಪಡೆಯುವ ಸಮಜಾಯಿಷಿಯನ್ನು ಪರಿಶೀಲಿಸಿ ನಿಯಮಾನುಸಾರ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |
| (III) | BDA ಬಡಾವಣೆಯಲ್ಲಿ ಎರಡು ಜಾಗೆಗಳಲ್ಲಿ ಪಾರ್ಕ್ ನಿರ್ಮಾಣ ಮಾಡಲು ಅಗತ್ಯ ಕ್ರಮ ಕೈಗೊಳ್ಳಲು ಕೋರಲಾಯಿತು. | ವಾರ್ಡ್ ಅಭಿಯಂತರರು ಬಿ.ಡಿ.ಎ ರವರಿಂದ ಸದರಿ ಜಾಗೆಗಳನ್ನು ತ್ವರಿತವಾಗಿ ಪಾಲಿಕೆಗೆ ಹಸ್ತಾಂತರಿಸುವ ಬಗ್ಗೆ ಅಗತ್ಯ ಕ್ರಮ ವಹಿಸುವುದು. |
| (IV) | ಅಧ್ಯಕ್ಷರು, ಪಾವಮಾನ ನಗರ ಬಡಾವಣೆ ರವರು ಮಾತನಾಡುತ್ತಾ ಈ ಕೆಳಕಂಡ ವಿಷಯಗಳನ್ನು ತಿಳಿಸಿದರು:- | |
| | (i) ತಮ್ಮ ಬಡಾವಣೆಯ ಪಾದಚಾರಿಗಳಲ್ಲಿ ಸಂಗ್ರಹಿಸಲಾಗಿರುವ ತ್ಯಾಜ್ಯವನ್ನು ಸ್ವಚ್ಛಗೊಳಿಸುವುದು | ಆರೋಗ್ಯ ಪರಿವೀಕ್ಷಕರು ಸ್ವಚ್ಛತ ಕಾರ್ಯವನ್ನು ಕೈಗೊಂಡಿರುವುದಾಗಿ ಸಭೆಗೆ ತಿಳಿಸಿದರು. |
| (V) | 9ನೇ ಹಂತ, 7ನೇ ಬ್ಲಾಕ್ ಜೆ.ಪಿ ನಗರ ದಲ್ಲಿ H.M World City ಹತ್ತಿರದ 80 ಫೀಟ್ ರಸ್ತೆ ಹಾಗೂ 60 ಫೀಟ್ ರಸ್ತೆಗಳಲ್ಲಿ ಗೂನುಗಳನ್ನು (Humps) ನಿರ್ಮಾಣ ಮಾಡಲು ಕೋರಿರುತ್ತಾರೆ | ಸಂಬಂಧಪಟ್ಟ ಸಂಚಾರ ಪೊಲೀಸರೊಂದಿಗೆ ವಾರ್ಡ್ ಅಭಿಯಂತರರು ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು. |

Scanned by CamScanner

| | | |
|---|---|---|
| **(VI)** | ಸೌತ್ ಅವೆನ್ಯೂ ಹಾಗೂ ಆರ್ಯ ಹಂಸ ಅಪಾರ್ಟ್‌ಮೆಂಟ್ ಬಡಾವಣೆಯಲ್ಲಿ ಬೀದಿ ನಾಯಿಗಳ ಕಾಟವು ಹೆಚ್ಚಾಗಿದ್ದು, ಸಾಕು ನಾಯಿಗಳನ್ನು ಹಾಗೂ ಸಾರ್ವಜನಿಕರ ಮೇಲೆ ದಾಳಿ ಮಾಡುತ್ತಿರುವುದನ್ನು ತಡೆಗಟ್ಟುವ ಬಗ್ಗೆ. | ಪಶುಪಾಲನಾ ಪರಿವೀಕ್ಷಕರು ರವರು ಕೂಡಲೇ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು |
| **(VII)** | ಅಧ್ಯಕ್ಷರು ಪರಿವರ್ತನಾ ಸಂಘ, ರಾಯಲ್ ಕೌಂಟಿ ರವರು ಕೆಳಕಂಡ ವಿಷಯಗಳ ಬಗ್ಗೆ ಕ್ರಮ ತೆಗೆದುಕೊಳ್ಳಲು ಕೋರಿರುತ್ತಾರೆ. | |
| | (i) ರಸ್ತೆ ಪಾದಚಾರಿಗಳಲ್ಲಿರುವ ವ್ಯಾಪರಸ್ಥರನ್ನು ತೆರುವುಗೊಳಿಸಿದ ನಂತರವು ಕೆಲ ವ್ಯಾಪಾರಸ್ಥರು ಪಾದ ಚಾರಿಯಲ್ಲಿ ಮರುಕಳಿಸುತ್ತಿದ್ದು ನಿಯಂತ್ರಗೊಳಿಸಲು ಕೋರಿರುತ್ತಾರೆ. | ಆರೋಗ್ಯ ಪರಿವೀಕ್ಷಕರು ರವರು ಸಂಚಾರ ಪೋಲಿಸರೊಂದಿಗೆ ನಿಯತಕಾಲಿಕವಾಗಿ ಪರೀಕ್ಷಿಸಿ ಅಂಗಡಿಗಳು ಮರುಕಳಿಸದಂತೆ ಕ್ರಮ ವಹಿಸಲು ಸೂಚಿಸಲಾಯಿತು. |
| | (ii) ಬಡಾವಣೆಯಲ್ಲಿ ಹೊಸದಾಗಿ ಅಕ್ಷಯ ಗ್ರಾಂಡ್ ಹೋಟೆಲ್ ನಿರ್ಮಾಣವಾಗಿದ್ದು, ವಾಹನ ನಿಲುಗಡೆ ವ್ಯವಸ್ಥೆ ಮಾಡದ ಕಾರಣ ರಸ್ತೆಗಳಲ್ಲಿ ವಾಹನ ದಟ್ಟನೆ ಉಂಟಾಗುತ್ತಿರುವುದನ್ನು ತಡೆಗಟ್ಟುವ ಬಗ್ಗೆ. | ಆರೋಗ್ಯ ಪರಿವೀಕ್ಷಕರು ಸ್ಥಳ ಪರಿಶೀಲಿಸಿ ವಾಹನ ನಿಲುಗಡೆ ವ್ಯವಸ್ಥೆಯನ್ನು ಕಲ್ಪಿಸಿಕೊಡಲು ಹೋಟೆಲ್ ಮಾಲೀಕರಿಗೆ ಸೂಚಿಸುವುದು. |
| | (iii) ತಮ್ಮ ಬಡಾವಣೆಯಲ್ಲಿರುವ Black Spots ಗಳನ್ನು ತೆರುವುಗೊಳಿಸಲು ಕೋರಿರುತ್ತಾರೆ. | ಆರೋಗ್ಯ ಪರಿವೀಕ್ಷಕರು ಮುಂದಿನ ವಾರದಲ್ಲಿ ಸ್ವಚ್ಛಗೊಳಿಸುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ. |
| | (iv) BWSSB ಬಡಾವಣೆ ಯಿಂದ ರಾಯಲ್ ಕೌಂಟಿ ಬಡಾವಣೆಗೆ ಅನಧಿಕೃತವಾಗಿ ಚರಂಡಿ ಸಂಪರ್ಕವನ್ನು ಒದಗಿಸಿದ್ದು, ಸ್ಥಳ ಪರಿಶೀಲಿಸಿ ಚರಂಡಿ ಮಾರ್ಗವನ್ನು ಸರಿಪಡಿಸಲು ಕೋರಿರುತ್ತಾರೆ. | ಸಂಬಂಧಪಟ್ಟ ರಸ್ತೆ ನೀರುಗಾಲುವೆ ಇಲಾಖೆ ಅಭಿಯಂತರರು ಸ್ಥಳ ಪರಿಶೀಲಿಸಿ ಕ್ರಮ ವಹಿಸಿ ಮುಂದಿನ ಸಭೆಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಲಾಯಿತು. |
| | (v) ರಸ್ತೆ ಬದಿಯಲ್ಲಿ ನೆಟ್ಟಿರುವ ಗಿಡಗಳು ಬಾಡಿ ಹೊಗುತ್ತಿದ್ದು ಸದರಿ ಗಿಡಗಳಿಗೆ ದಿನನಿತ್ಯ ನೀರುಹಾಕುವ ವ್ಯವಸ್ಥೆ ಕಲ್ಪಿಸಲು ಕೋರಿರುತ್ತಾರೆ. | ಆರೋಗ್ಯ ಪರಿವೀಕ್ಷಕರಿಗೆ ನೀರಿನ ವ್ಯವಸ್ಥೆ ಕಲ್ಪಿಸಲು ಸೂಚಿಸಲಾಯಿತು. |
| **(VIII)** | (i) 9ನೇ ಹಂತ, 7ನೇ ಬ್ಲಾಕ್ ಜೆ.ಪಿ.ನಗರದಲ್ಲಿ ಉಳಿದಿರುವ ಕೆಲ Manhole Lid ಗಳನ್ನು ದುರಸ್ಥಿಪಡಿಸಲು ಕೋರಿರುತ್ತಾರೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರಿಗೆ ದುರಸ್ಥಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಲಾಯಿತು. |
| | (ii) ತಮ್ಮ ಬಡಾವಣೆಯಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಸಂಬಂಧಪಟ್ಟ ಮಾರ್ಷಲ್ಸ್ ಗಳನ್ನು ತಮ್ಮ ಬಡಾವಣೆಗೆ ನಿಯೋಜಿಸಲು ಕೋರಿರುತ್ತಾರೆ. | ಆರೋಗ್ಯ ಪರಿವೀಕ್ಷಕರಿಗೆ , ಮಾರ್ಷಲ್ಸ್ ಗಳನ್ನು ವಾರ್ಡ್‌ನ ವಿವಿಧ ಬಡಾವಣೆಯಲ್ಲಿ ಸೂಕ್ತವಾಗಿ ನಿಯೋಜಿಸಲು ಸೂಚಿಸಲಾಯಿತು. |

Scanned by CamScanner

| | | |
|---|---|---|
| **(IX)** | (i) ರಾಘವನ ಪಾಳ್ಯ ಬಡಾವಣೆಯಲ್ಲಿ ಬೀದಿ ನಾಯಿಗಳನ್ನು ಹಾಗೂ ಹಸುಗಳನ್ನು ತಡೆಗಟ್ಟುವ ಬಗ್ಗೆ. | ಪಶುಪಾಲನಾ ಪರಿವೀಕ್ಷಕರು ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು. |
| | (ii) ರಾಘವನ ಪಾಳ್ಯ ಬಡಾವಣೆಯಲ್ಲಿರುವ ಉದ್ಯಾನವನವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ತೆರೆಯಲು ಕೋರಿರುತ್ತಾರೆ. | ತೋಟಗಾರಿಕೆ ಅಧೀಕ್ಷರು ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು. |
| **(X)** | ಸುರಭಿ ನಗರದ ಮುನೇಶ್ವರ ದೇವಸ್ಥಾನದ ಪಕ್ಕ ಇರುವ ಹಿರಿಯ ನಾಗರೀಕರ ಉದ್ಯಾನವನವನ್ನು ದುರಸ್ಥಿಗೊಳಿಸುವ ಬಗ್ಗೆ. | |
| **(XI)** | ಆರ್ಯ ಹಂಸ ಗ್ರ್ಯಾಂಡೆ ಅಪಾರ್ಟ್‌ಮೆಂಟ್ ಮುಂಭಾಗದ ರಸ್ತೆ ಕಾಮಗಾರಿಯನ್ನು ಕೈಗೊಳ್ಳಲು ಬಿ.ಡಿ.ಎ ರವರಿಂದ ಪಾಲಿಕೆಗೆ ಸದರಿ ರಸ್ತೆಯನ್ನು ಹಸ್ತಾಂತರಿಸಿಕೊಳ್ಳುವ ಬಗ್ಗೆ. | ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ), ಬೊಮ್ಮನಹಳ್ಳಿ ರವರು ಮುಖ್ಯ ಅಭಿಯಂತರರು (ಬಿ.ಡಿ.ಎ) ರವರೊಂದಿಗೆ ಸಮನ್ವಯ ಸಾಧಿಸಿ ಶೀಘ್ರವಾಗಿ ಕಾಮಗಾರಿಯನ್ನು ಕೈಗೊಳ್ಳಲು ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು. |

ಈ ಮೇಲ್ಕಂಡ ಎಲ್ಲಾ ವಿಷಯ/ಸಮಸ್ಯೆಗಳನ್ನು ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಡ್ಡಾಯವಾಗಿ ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು
ವಾರ್ಡ್ ಸಂಖ್ಯೆ: 194,

Scanned by CamScanner

ಪ್ರತಿಯನ್ನು:-

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
4. ಅಧೀಕ್ಷಕ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನಗೆ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ, ಗೊಟ್ಟಿಗೆರೆ ರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಃಘಙಙ , ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
7. ಸಹಾಯಕ ನಿರ್ದೇಶಕರು (ಪಶುಪಾಲನೆ), ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
8. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಬೊಮ್ಮನಹಳ್ಳಿ) ವಲಯ ಬಿಬಿಎಂಪಿ.
9. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
10. ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು, ಬಿಬಿಎಂಪಿ
11. ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ ಬಿಬಿಎಂಪಿ.
12. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ ಬಿಬಿಎಂಪಿ.
13. ತೋಟಗಾರಿಕೆ ಅಧೀಕ್ಷಕರು, ಬೊಮ್ಮನಹಳ್ಳಿ ವಲಯ.
14. ಆರೋಗ್ಯ ವೈದ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
15. ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ
16. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣಾ ವಿಭಾಗ.
17. ಸಹಾಯಕ ಕಂದಾಯ ಅಧಿಕಾರಿ ಅಂಜನಾಪುರ ವಿಭಾಗ.
18. ಕಲ್ಯಾಣಾಧಿಕಾರಿಗಳು ಬೊಮ್ಮನಹಳ್ಳಿ ವಲಯ.
19. ಉಪವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
20. ಪೋಲೀಸ್ ಇನ್ಸ್‌ಪೆಕ್ಟರ್, ಹುಳಿಮಾವು ಮತ್ತು ಕೋಣನಕುಂಟೆ ಪೋಲೀಸ್ ಠಾಣೆ.
21. ಕಂದಾಯ ಅಧಿಕಾರಿಗಳು, ಅಂಜನಾಪುರ ಉಪ ವಲಯ.
22. ಸ್ಥಳೀಯ ನಾಗರಿಕ ಕಲ್ಯಾಣ ಸಂಸ್ಥೆಗಳು.

Scanned by CamScanner